ಕೆ.ಪಿ. ರಾಮಗುಂಡಿ, ಬೈಲಹೊಂಗಲ

*ನಂಬಿಕೆಗೆ ನಾಯಿ; ಶ್ರಮಕ್ಕೆ ಕತ್ತೆ; ಹಂಚಿತಿನ್ನುವುದಕ್ಕೆ ಕಾಗೆ. ಮನುಷ್ಯ?*



ಕ್ಷಮಿಸಿ; ಶ್ರೇಷ್ಠ ಪ್ರಾಣಿ ಪಕ್ಷಿಗಳೊಡನೆ ಕ್ಷುದ್ರ ಪ್ರಾಣಿಯನ್ನು ಹೋಲಿಸುವುದು ತರವಲ್ಲ.

ಕೆ.ಎಂ. ವೀರೇಶ, ಕೂಡ್ಲಿಗಿ

*ಈ ಜಾಗತೀಕರಣದಲ್ಲೂ ಮೌಢ್ಯದಲ್ಲಿ ಮುಳುಗಿರುವ ನಮಗೆ ಒಂದು ಕಿವಿಮಾತು ಹೇಳಬಲ್ಲಿರಾ ರಾಮ್?*

‘ಒಂದು ಕಿವಿಮಾತು’ ಎನ್ನುವುದೇ ತೊಂದರೆ; ಎರಡೂ ಕಿವಿಗಳಲ್ಲಿ ಕೇಳಿ, ಮೆದುಳಿನ ಪದರದಲ್ಲಿ ಸೋಸಿದರೆ ಮೌಢ್ಯದ ಮಬ್ಬು ಮಾಯ!

ಅಕ್ಷಯ ಜೈನ್, ಶ್ರವಣಬೆಳಗೊಳ

*ನೀವು ಉತ್ತರ ವಿಶ್ವವಿದ್ಯಾಲಯದ ಕುಲಪತಿ ಎಂದರೆ ನೀವು ಉಬ್ಬುತ್ತೀರಾ ಸಾರ್?*

ಹುದ್ದೆ ನೀಡಿದ್ದೀರಿ; ಅದಕ್ಕೆ ತಕ್ಕ ಅರ್ಹತೆಯನ್ನು ಕಾಪಾಡಿಕೊಳ್ಳಲು ಯತ್ನಿಸುತ್ತೇನೆ ಎನ್ನುತ್ತೇನೆ.

ಎಚ್.ಆರ್. ದೇಸಾಯಿ, ರಾಯಚೂರು

*ಕಣ್ಣಿಗೆ ಕಾಣದ ಆತ್ಮಕ್ಕೆ ವಾಸಿಸಲು ಒಂದು ಶರೀರದ ಅವಶ್ಯಕತೆ ಏಕಂತೆ?*



ಟ್ರಾನ್ಸ್‌ಫರಬಲ್ ಜಾಬ್ ಆದ್ದರಿಂದ ‘ಬಾಡಿ’ಗೆಮನೆ ಅನಿವಾರ್ಯ.

ಡೈರಿ ವಿಶ್ವನಾಥ್, ಬೆಂಗಳೂರು

*ತೂಕ ಇಳಿಸುವುದರ ಬಗ್ಗೆ ನಿಮ್ಮ ಅಭಿಪ್ರಾಯ?*

ಇಳಿಸಲೇಬೇಕು – ತಲೆಯಮೇಲೆ ಎಷ್ಟು ಹೊತ್ತು ಹೊತ್ತಿರಲು ಸಾಧ್ಯ!

ಆರತಿ ಘಟಿಕಾರ್, ದುಬೈ

*ಬ್ರೇಕಿಂಗ್ ನ್ಯೂಸ್ ಎನ್ನುವ ಹೆಸರಿನ ಸುದ್ದಿವಾಹಿನಿ ತೆರೆಯಬೇಕೆಂದಿರುವೆ. ನಿಮ್ಮ ಸಲಹೆ ಏನು ರಾಮ್?*

ಬಾರ್ಕಿಂಗ್ ನಾಯ್ಸ್ ಎಂದು ಇಡಿ; ಅರ್ಥಪೂರ್ಣವಾದೀತು!

ಟಿ.ಆರ್. ರವೀಂದ್ರ, ಬೆಂಗಳೂರು

*ಹೆಣ್ಣು ಕೆಟ್ಟರೆ ತವರಿಗೆ. ಗಂಡು ಕೆಟ್ಟರೆ?*

ಹೋಯಿತು ಆ ಕಾಲ; ಈಗಿನ ತವರು ಸುಖದ ಕಾಲಕ್ಕೆ ಮಾತ್ರ ಹಿತವರು.

ವಿ. ಹಮೀದ್, ವಿಟ್ಲ

*ಒಲಿದು ತ್ಯಜಿಸಿದ್ದಾಳೆ. ಮನೆಯ ಮುಂದೆ ಪ್ರತಿಭಟಿಸಲೆ?*

ಎಚ್ಚರ. ‘ಒಲಿದು’ವಿನ ’ಲಿ’ ಜಾಗದಲ್ಲಿ ’ದೆ’ ಬಂದಾತು!

ಕೆ.ಎಂ. ವಿಭೂತಿ, ಹರಿಹರ

*ಚೀಟಿ ವ್ಯವಹಾರದಲ್ಲಿ ಲಾಸ್ ಆದವರೆಲ್ಲ ಭವಿಷ್ಯ ಹೇಳಲು ಶುರು ಮಾಡಿದ್ದಾರಲ್ಲ, ಅದರ ರಹಸ್ಯವೇನು ಗುರುವೆ?*

ಚೀಟಿಯಲ್ಲಿ ಹೋದದ್ದನ್ನು ಚೀಟಿಂಗ್ ಮೂಲಕ ಪಡೆಯುವ ಹುನ್ನಾರ.

ಜಾಕೋಬ್ ಡಿಸೋಜ, ಕುರುವಳ್ಳಿ

*ತಾನೊಬ್ಬ ಸಾಲಗಾರನಾಗಿ ಇನ್ನೊಬ್ಬರಿಗೆ ಸಾಲ ಕೊಡುವವರಿಗೆ ಏನೆನ್ನಬೇಕು?*

ಸರ್ಕಾರ!

ಪಿ.ಜಿ. ರಾಘವೇಂದ್ರ, ಮೈಸೂರು

*ವರ್ತಮಾನದ ಬಗ್ಗೆ ‘ಗೊತ್ತಿಲ್ಲ, ಗೊತ್ತಿಲ್ಲ’ ಎನ್ನುವ ಮುಖ್ಯಮಂತ್ರಿಗಳು ಮುಂದಿನ ಸಿಎಂ ನಾನೇ ಎಂದು ಭವಿಷ್ಯ ನುಡಿಯುವರಲ್ಲ?*

ಸರಿಯೇ ಇದೆಯಲ್ಲ; ಇಂದಿನ ಅರಿವು ಇಲ್ಲದವರಿಗೆ ನಾಳೆಯ ಭ್ರಮೆಗಳೇ ಆಧಾರ.

ಹಾಡ್ಯ ಬಿ. ಜಯಾನಂದ, ಮೈಸೂರು

*ಕಳ್ಳರನ್ನು ಹಿಡಿಯುವ ಪೊಲೀಸ್ ಇಲಾಖೆಯ ಸಚಿವರನ್ನು ‘ಗೃಹ ಸಚಿವ’ ಎನ್ನುತ್ತಾರಲ್ಲ, ಏಕೆ?*

ರಾಜ್ಯಕ್ಕಿಂತ ಹೆಚ್ಚಾಗಿ ವಿಐಪಿಗಳ, ಬುದ್ಧಿಜೀವಿಗಳ ಗೃಹ ಕಾಯಲು ಆದ್ಯತೆ ನೀಡುವುದರಿಂದ.

ಮಲ್ಲನಗೌಡ ಸಿ. ಪಾಟೀಲ, ರಂಭಾಪೂರ

*ಮನುಷ್ಯನಿಗೆ ನೆಮ್ಮದಿ ಸಿಗುವುದು ಯಾವಾಗ?*

ಅವನು ಪಡೆಯಲು ಒಪ್ಪಿದಾಗ; ಸಾಮಾನ್ಯವಾಗಿ ಅತ್ಯಂತ ಸಂತಸದ ಗಳಿಗೆಯಲ್ಲೂ ಗೋಳಾಡುವುದು ಮನುಜನ ಚಾಳಿ.

## ಬಹುಮಾನಿತ ಪ್ರಶ್ನೆ

ಎ. ಕೃಷ್ಣಾನಂದಶೆಟ್ಟಿ, ಕಿನ್ನಿಗೋಳಿ

*ಗಿಡಕ್ಕೂ, ಗಿಡುಗಕ್ಕೂ ಏನು ವ್ಯತ್ಯಾಸ ರೀ?*

ಗಿಡದ ವೃದ್ಧಿಗೆ ಸಾವಯವ; ಗಿಡುಗನ ವೃದ್ಧಿಗೆ ಸಾಯುವವ!

ಓಂ ಚನ್ನೇಶ್, ಭದ್ರಾವತಿ

*ಹುಡುಗಿಯರು ಯಾಕೆ ಜಾಸ್ತಿ ಓರೆಗಣ್ಣಿನಿಂದ ನೋಡ್ತಾರೆ?*

‘ಆರ್ವೋರೇ’ ಅಥವಾ ‘ಜಾರ್ವೋರೇ’ ಎನ್ನುವುದಕ್ಕೆ ಮುನ್ನ ಪರೀಕ್ಷಿಸುವುದಕ್ಕೆ ಓರೆನೋಟವೇ ಸೂಕ್ತವಂತೆ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

*ಮನುಷ್ಯನಿಗೆ ಈ ದೇಹವೆಲ್ಲಾ ಚಿನ್ನವಾಗಿದ್ದರೆ ಹೇಗಿರುತ್ತಿತ್ತು ರಾಮ್‌ಶ್ರೀ?*

ಕಾಮಾಲೆ ಬಂದರೆ ತಿಳಿಯಲು ಬಹಳ ಕಷ್ಟವಾಗುತ್ತಿತ್ತು.

ಪಿ.ಎನ್. ಶ್ರೀವತ್ಸ, ಬೆಂಗಳೂರು

*ಹೆಣ್ಣು ಎಲ್ಲದರಲ್ಲೂ ಮುಂದಿರುವಾಗ ಮದುವೆಯ ಛತ್ರದಲ್ಲಿ ಬಡಿಸಲು ಇನ್ನೂ ಏಕೆ ನೇಮಕಗೊಂಡಿಲ್ಲ?*

ಸಮಯ, ಖರ್ಚು ಉಳಿಸಲು; ಸುಂದರಿಯೊಬ್ಬಳು ಬಡಿಸಲು ನಿಂತರೆ ತಿಂಬರು ಮೂರ್ನಾಲ್ಕು ಬಾರಿ! ಕರೆವರು ಹತ್ತಾರು ಬಾರಿ!

ಸುನಂದ ಲೋಕೇಶರೆಡ್ಡಿ, ದಾವಣಗೆರೆ

*ಸರ್ಕಾರಿ ಆಸ್ಪತ್ರೆಗಳೇಕೆ ಒನ್ ವೇ ಆಗಿರುತ್ತವೆ?*




ಸರ್ವರಿಗೂ ಸಮಬಾಳು; ಸರ್ವರಿಗೂ ಸಮಪಾಲು ಎಂಬುದನ್ನು ಮಸಣದ ನೌಕರರಿಗೂ ಅನ್ವಯಿಸುವ ಯತ್ನವಂತೆ.

ಎಸ್.ಜಿ. ಕರನಂದಿ, ಹುನಗುಂದ

*ಸದ್ಯದಲ್ಲಿ ಕನ್ಯೆಗಳು ಕಡಿಮೆ, ವರಗಳು ಹೆಚ್ಚು. ಮುಂದೆ?*

ಮಗು ತಂದೆತಾಯಿಗಳ ಫೋಟೋ ತೋರಿಸುತ್ತದೆ; ಇತ್ತ ಅಪ್ಪನ ಚಿತ್ರ; ಅತ್ತ ಟೆಸ್ಟ್‌ಟ್ಯೂಬ್!

■ ರಾಮ್